ಇದ್ದಕ್ಕಿದ್ದಂಗ ಎದ್ದು ಕುಂತ್ಲು ಪದ್ಮ. ಆತ ಕೈ ಹಿಂದಕ್ಕ ತೊಗೊಂಡ. ಅಲ್ಲೇ ಕೆಳಗೆ ಬಿದ್ದಿದ್ದ ಕುಬಸ ತೊಟಗಂಡು, ಆತನ ಭುಜಕ್ಕೆ ತಲೆ ಆನಿಸಿ, ಕೇಳಿದ್ಲು ಆಕಿ.

"ವಿರುಪಾಪುರ ಗಡ್ಡಿ ಛೊಲೋ ಇರ್ತದಾ?"

"ಮ್... ಛೊಲೋ ಇರ್ತದ. ನದಿ ದಂಡೆಗೆ ಕುಂತಗಂಡ್ರೆ ಭಾಳ ಸಮಾಧಾನ ಅನಸ್ತದ. ಜೀವ್ನದ ಪ್ರಯಾಣ ಮಾಡಿ ಮಾಡಿ ಸಾಕಾಗಿರೋ ಮನುಷ್ಯಾಗ ಅದೇ ಕೊನೇ ಜಾಗ ಅನಸ್ತದ. ಒಂದು ಮಾತು ಹೇಳ್ಲಾ? ಅದೇ ನನ್ ಬದುಕಿನ ಕೊನೇ ಮಜ್ಲು ಅನಸ್ತದ. ಭಾಳ ಮಂದಿ ಬರ್ತಾರ ಅಲ್ಲಿಗೆ. ಸತ್ತವರಿಗೆಲ್ಲ ಪಿಂಡ ಇಡ್ತಾರ. ಎಲ್ಲರ ಆತ್ಮಗಳು ಅಲ್ಲಿಗೆ ಬಂದು ಹೋಗ್ತವ" ಕಣ್ಣು ಮುಚಿಗೆಂಡೇ ಹೇಳ್ದ ಆತ.

"ಆತ್ಮಗಳನ್ನ ನೀವು ನೋಡೀರೇನು?"

"ಅವು ಕಾಣಸಂಗಿಲ್ಲ. ಆದ್ರೆ ಇರಾದು ಖರೇವ್ ಆದ. ಇರ್ತಾವ ಅಂತ ಅಂದುಕಂತೀವಿ. ಹಂಗಂತ ಅನಸ್ತದ. ಅನಸಾದೇ ಮುಖ್ಯ."

"ನನ್ನ ಅಲ್ಲಿಗೆ ಕರಕಂಡು ಹೋಗ್ತೀರಾ?"

ಆಕೆ ಪ್ರಶ್ನೆಗೆ ಆತನ ಹತ್ರ ಜವಾಬು ಇರಲಿಲ್ಲ. ತಲೆ ಎತ್ತಿ ಆತನ ಕಡೆ ನೋಡಿದ್ಲು ಪದ್ಮ. ಅದೇ ಟೈಮಿಗೆ ಆತ ಮುಚ್ಚಿದ ಕಣ್ಣು ತೆಗ್ದು ಆಕೀ ಕಡೆ ನೋಡಿದ. ಆತ ಮನಸಿನ್ಯಾಗೇ ಏನೋ ಹೇಳಾಕತ್ತಾನೇನೋ ಅನಸ್ತು ಆಕಿಗೆ. ಇಬ್ಬರ ಕಣ್ಣುಗಳ ನಡುವ ಯಾವುದೋ ಮಟ್ಟದಾಗ ಮಾತುಕತೆ ಆಗಾಕತ್ಯಾದೇನೋ ಅನ್ನಂಗಾಯ್ತು. ಮೈಯಲ್ಲಾ ಬೆವರು ಬಂದಂಗಾಯ್ತು. ತಲ್ಯಾಗ ನಶಾ ಏರಿದಂಗಾಯ್ತು. ಆತ ನೋಡ್ತಿರಾ ನೋಟ ಆಕೀ ಅಂತರ್ನೋಟವನ್ನ ಹೋಳು ಹೋಳು ಮಾಡಾಕತ್ಯಾದೇನೋ ಅನಿಸಿ, ಮೈ ಮನಸ್ಸೆಲ್ಲಾ ಹೆಂಗೆಂಗೋ ಆದಂಗಾಗಿ, ಏನೋ ಬ್ರಹ್ಮರಹಸ್ಯ ಗೊತ್ತಾದಂಗಾಗಿ, ಇದ್ದಕ್ಕಿದ್ದಂಗ ರತಿರಹಿತ ರಸಸ್ರಾವವನ್ನ ಅನುಭವಿಸಿದಂಗಾಗಿ, ಕಣ್ಣೆಲ್ಲಾ ಕತ್ತಲಾದಂಗಾಗಿ, ಮೆಲ್ಲಕ ಆತನ ಎದೆ ಮ್ಯಾಲೆ ಒರಗಿಬಿಟ್ಲು ಪದ್ಮ.

ಆತ ಯಾವಾಗ ಎದ್ದು ಹೋಗಿದ್ನೋ ಆಕೀಗೆ ಗೊತ್ತೇ ಆಗಿರಲಿಲ್ಲ. ಅಗಣಿತ ಶೂನ್ಯದೊಳಗ ಎಚ್ಚರ ಆದಂಗಾಗಿತ್ತು ಆಕಿಗೆ. ರೂಮಿನಿಂದ ಹೊರಗ ಬಂದಾಗ ಬೇಬಿ ಅಂದ್ಲು, "ನಾಳೆ ಇದೇ ಟೈಮಿಗೆ ಬರ್ತೀನಂತೇಳ್ಯಾನ. ಆತಗ ನೀನಾ ಬೇಕಂತ".

ಆತ ನಾಳೆ ಬರಂಗಿಲ್ಲ. ನಾಡದ ಬರಂಗಿಲ್ಲ. ಇನ್ಯಾವತ್ತೂ ಅಲ್ಲಿಗೆ ಬರಂಗಿಲ್ಲ ಅನ್ನಾದು ಆಕಿಗೆ ಮಾತ್ರ ಗೊತ್ತಿತ್ತು. ತನ್ ದೇಹ, ತನ್ ಸುತ್ತಿರೋ ಪ್ರಪಂಚ ಮತ್ತ ಅದರಾಗಿರೋ ಜೀವರಾಶಿ... ಎಲ್ಲಾ ಬ್ಯಾರೇನೇ ಕಾಣಾಕತ್ತಿತ್ತು ಆಕಿಗೆ. ತನ್ನ ಮೈಯಿ ತನ್ನದಲ್ಲ... ಅನ್ನಾ ಮಾತು ಆಕೀಗೆ ಗೊತ್ತಾಗಿಬಿಟ್ಟಿತ್ತು. ಈ ವಿಚಾರ ಗೊತ್ತಾಗೋ ಹೊತ್ತಿಗೆ, ಆಕೀ ಮನಸೆಲ್ಲಾ ವಿರುಪಾಪುರ ಗಡ್ಡಿ ತುಂಬಿ ಹೋಗಿತ್ತು.

★★★

ಸಿಡ್ಲು ಬಡದು ಬದುಕುಳಿದವನು ಕುಂತುಗಂಡಂಗ ಕುಂತುಗಂಡಿದ್ದ ಇನ್‌ಸ್ಪೆಕ್ಟರ್ ರೆಡ್ಡಿ. ಇದ್ದಕ್ಕಿದ್ದಂಗ ಮುಂದಕಬಂದು ಮತ್ತೆ ಆತನ ಕಾಲು ಹಿಡುಕಂಡ್ಲು ಪದ್ಮ. ಆಕೀನ ತಡೀಬೇಕಂತ ಅನಸಲಿಲ್ಲ ಆತಗ.

"ಎದ್ದೇಳು... ಎದ್ದು ನಿಂತುಗಾ" ಆತನ ಧನಿ ಒಡುದುಹೋದಂಗಾಗಿತ್ತು. ಮಾತು ಎಲ್ಲೋ ದೂರದಿಂದ ಬಂದಂಗಾಗಿತ್ತು. ಆಕಿ ಎದ್ದು ಎರಡು ಹೆಜ್ಜೆ ಹಿಂದಕ ನಡುದು ನಿಂತುಗಂಡಳು.

"ವಿರುಪಾಪುರ ಗಡ್ಯಾಗ ಎಷ್ಟು ದಿನ ಇರಬೇಕಂತ ಅಂದ್ಕಂಡೀಯಾ?"

"ಎರಡು ದಿವ್ಸ. ನದಿ ಬಗಲಾಗಾ ಇರಬೇಕಂತ ಅಂದ್ಕಂಡೀನಿ."

ಮೆಲ್ಲಕ ತಲೆ ಆಡಿಸಿಕೆಂತ ಕೇಳಿದ ರೆಡ್ಡಿ, "ಆ ಮ್ಯಾಗ?"